## ಅಧ್ಯಾಯ - 7

# ಆತ್ಮ, ಪ್ರಾಣ ಮತ್ತು ಶರೀರ,

ಮನುಷ್ಯನು ಆತ್ಮ, ಪ್ರಾಣ ಮತ್ತು ಶರೀರವಾಗಿದ್ದಾನೆ. ಈ ಮೂರು ಭಾಗಗಳಲ್ಲಿ ಅವು ಮಾಡುವ ಕೆಲಸಗಳು ಏನೆಂದು ನಾವು ತಿಳಿದುಕೊಳ್ಳುವವರಾಗಿರಬೇಕು. ಈ ಸಂಭಂಧವನ್ನು ತಿಳಿದು ಕೊಳ್ಳುವುದು ತುಂಬಾ ಅವಸರವಾದದ್ದು.

## ಮನುಷ್ಯನ ಆತ್ಮ

''ದೇಹದಿಂದ ಹುಟ್ಟಿದ್ದು ದೇಹವೇ; ಆತ್ಮದಿಂದ ಹುಟ್ಟಿದ್ದು ಆತ್ಮವೇ''
ಯೋಹಾನ ೩ : ೬.

ನಾವು ಶರೀರದಿಂದ ಹುಟ್ಟಿದಾಗ ನಮ್ಮ ಆತ್ಮವು ದೇವರ ಇಷ್ಟಕ್ಕೆ ಸರಿಯಾಗಿ ವರ್ತಿಸುವುದಿಲ್ಲ. ಯಾವಾನಾದರು ಯೇಸುಕ್ರಿಸ್ತನನ್ನು ನಂಬದೇ ಜೀವಿಸದರೆ, ಅಂಥವನ ಆತ್ಮವು ಸತ್ತು ಜೀವವಿಲ್ಲದ ಆತ್ಮವಾಗಿ ಇರುತ್ತದೆ. ಯಾಕಂದರೆ ಯೇಸುವಿನಲ್ಲಿ ನಂಬಿಕೆ ಇಡದೇ ಇದ್ದಲ್ಲಿ ನಾವೂ ಇನ್ನೂ ಅತ್ಮದಿಲ್ಲ ಹುಟ್ಟಿಲ್ಲ.

ಯೇಸು ದೇಳಿದ್ದೇನಂದರೆ ''ನಾನು ನಿನಗೆ ನಿಜನಿಜವಾಗಿ ಹೇಳುತ್ತೇನೆ ಒಬ್ಬನು ಹೊಸದಾಗಿ ಹುಟ್ಟದಿದ್ದರೆ ಅವನು ದೇವರ ರಾಜ್ಯವನ್ನು ಕಾಣಲಾರನು'' ಯೋಹಾನ ೩ : ೩.

ಆದುದರಿಂದ ಯಾನವನ ಆತ್ಮಕ್ಕೆ ಯೇಸು ಕ್ರಿಸ್ತನನ್ನು ನಂಬದೇ ಇದ್ದರೆ, ಯಾವುದೇ ರೀತಿಯ ಲಾಭವಿಲ್ಲ. ಒಬ್ಬನು ಹೊಸದಾಗಿ ಹುಟ್ಟಿದಾಗಲೇ ಅವನು ದೇವರ ರಾಜ್ಯಕ್ಕೆ ಸಭ್ಯನಾಗುವನು. ಈ ರೀತಿಯಾಗಿ, ಯೇಸುವನ್ನು ನಂಬಿ ದೀಕ್ಷಾಸ್ನಾನ ತೆಗೆದುಕೊಂಡಾಗ ನೀನು ಆತ್ಮದಲ್ಲಿ ಜನಿಸಿ ದೇವರ ಆತ್ಮದ ಮೂಲಕ ನಡೆಸಲ್ಪಡುತ್ತೀ. ದೇವರ ಆತ್ಮವು ನಿನ್ನ ಬಗ್ಗೆ ಸರಿಯಾದ ಸಾಕ್ಷಿಯನ್ನು ಕೊಡುತ್ತಾನೆ. ಹೇಗೆ ನಿನ್ನ ಶರೀರವೂ ಕೂಡ ಪರಿಶುದ್ಧವಾಗಿ ದೇವರಿಗಾಗಿ ಉಪಯೋಗಿಸಲ್ಪಡುತ್ತದೆ.

## ಪ್ರಾಣ

ಮನುಷ್ಯನ ಪ್ರಾಣಕ್ಕೆ ಜೀವನದಲ್ಲಿ ಮೂರು ಸ್ಥಾನಗಳಿವೆ.

ಎ) ಮನಸ್ಸು - ನಮ್ಮ ಆಲೋಚನೆ ಮತ್ತು ಜ್ಞಾಪಕಶಕ್ತಿಯು.

ಬಿ) ಬಿರುಸುತನ - ನಮ್ಮ ಪ್ರೀತಿ ಮತ್ತು ಅನಿಸಿಕೆಗಳು.


ಸಿ) ಇಷ್ಟವು - ನಾವು ಮಾಡುವ ಕೆಲಸದ ನಿಶ್ಚಯತೆ ಮತ್ತು ತೀರ್ಮಾನ ಮಾಡುವುದು.

ಇಲ್ಲಿ ಆತ್ಮವನ್ನು ಪ್ರಾಣವಾಗಿ ಯೇಸುಕ್ರಿಸ್ತನು ತನ್ನ ಮಾತಿನಲ್ಲಿ ಬಳಸಿದ್ದಾರೆ. ಮಾನವನಿಗೆ ಶರೀರವು ಮಾತ್ರವಲ್ಲಿ ಆತನು ಆಲೋಚನೆಯನ್ನು ಹೊಂದಿದ್ದಾನೆ. ಅಂದರೆ ಆತನ ವ್ಯಕ್ತಿತ್ವವು ಮತ್ತು ಗುಣ ಲಕ್ಷಣಗಳು. ನಾವು ದೇವರ ಆತ್ಮದಿಂದ ಜನಿಸುವವರೆಗೂ ನಮ್ಮ ಜೀವನಕ್ಕೆ ಬೆಲೆಯಲ್ಲಿ. ದೇವರ ಆತ್ಮದಿಂದ ಜನಿಸಿದ ಮೇಲೆ ದೇವರ ಸ್ವಭಾವವನ್ನು ಧರಿಸಿ ಜೀವಿಸುತ್ತೇವೆ. ನಮ್ಮ ಮನಸ್ಸಿನಿಂದ ಅನೇಕ ಸಮಸ್ಯೆಗಳನ್ನು ಅರ್ಥಮಾಡಿಕೊಂಡು ರೋಷದಿಂದ ಇರದೆ ದೇವರ ಆಲೋಚನೆ ಹೊಂದಿರಲು ಬಯಸುತ್ತೇವೆ.


## ಶರೀರ :

ಶರೀರವು ಆತ್ಮವು ವಾಸಮಾಡಲು ಸಹಕಾರಿಯಾಗಿದೆ. ನಾವು ಆತ್ಮದಲ್ಲಿ ಏನು ತೀರ್ಮಾನ ಮಾಡುತ್ತೇವೂ ಅದನ್ನು ಶರೀರದ ಮೂಲಕವಾಗಿ ನಡೆಸುತ್ತೇವೆ. ಹೀಗೆ ಆತ್ಮದ ಪ್ರಕಾರವೇ ಶರೀರವೂ ಕೂಡ ಕೆಲಸಮಾಡುತ್ತದೆ. ನಾವು ಹೊಸದಾಗಿ ಹುಟ್ಟಿದಾಗ ನಮ್ಮ ಶರೀರವು ಆತ್ಮನು ವಾಸಮಾಡುವ ಸ್ಥಳವಾಗಿ ಇರುತ್ತದೆ. ಅಂದರೆ, ನಾವು ಪವಿತ್ರ ಆತ್ಮನ ಚಿತ್ತದ ಪ್ರಕಾರ ನಡೆಯಬೇಕು. ಹೀಗೆ ದೇವರ ಚಿತ್ತಕ್ಕೆ ಅನುಗುಣವಾಗಿ ದೇವರ ಮಾತಿನಂತೆ ನಾವು ಪವಿತ್ರ ಆತ್ಮಕ್ಕೆ ಬೆಲೆಕೊಟ್ಟು ಆತನ ದಾರಿಯಲ್ಲಿ ಮುಂದೆ ಸಾಗುತ್ತಾ ಯೇಸುಕ್ರಿಸ್ತನನ್ನು ಮಹಿಮೆ ಪಡಿಸುವ ರೀತಿಯಲ್ಲಿ ಜೀವಿಸುವುದೇ ನಿಜವಾದ ಕ್ರೈಸ್ತನ ಜೀವನ ಆಗಿದೆ. ಇದನ್ನೇ ಆತ್ಮನ ಅನುಗುಣಕ್ಕೆ ಜೀವಿಸುವುದು ಎನ್ನುವರು.

“ನಾವು ದೇವರ ಮಕ್ಕಳಾಗಿದ್ದೇವೆಂಬುದಕ್ಕೆ ಪವಿತ್ರಾತ್ಮನೇ ನಮ್ಮ ಆತ್ಮದೊಂದಿಗೆ ಸಾಕ್ಷಿಹೇಳುತ್ತಾನೆ. ಮಕ್ಕಳಾಗಿದ್ದರೆ, ಬಾಧ್ಯರಾಗಿದ್ದೇವೆ. ದೈವರಿಗೆ ಬಾಧ್ಯರು, ಕ್ರಿಸ್ತನೊಂದಿಗೆ ಬಾಧ್ಯರು ಹೇಗೆಂದರೆ ಕ್ರಿಸ್ತನಿಗೆ ಸಂಭವಿಸಿದ ಬಾದೆಗಳಲ್ಲಿ. ನಾವು ಪಾಲುಗಾರರಾಗುವುದಾದರೆ ಆತನ ಮಹಿಮೆಯಲ್ಲಿಯೂ ಪಾಲುಗಾರರಾಗುವೆವು. ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು. ಇಗೊಪೂರ್ವಸ್ಥಿತಿ ಹೋಗಿ ಎಲ್ಲಾ ನೂತನ ವಾಯಿತು. ರೋಮಾ ೮ : ೧೬ ೨ ಕೊರಿಂಥ ೫ : ೧೭




ಕ್ರಿಸ್ತನಲ್ಲಿ ಇಲ್ಲದವನು




ಕ್ರಿಸ್ತನಲ್ಲಿ ಹೊಸದಾಗಿ ಹುಟ್ಟಿದವನು

## ನಿನ್ನ ಮನಸ್ಸೆ ಉತ್ಸಾಹ:

ನಮಗೆ ತಿಳಿದಿರುವಂತೆ ನಾವು ಐದು ಗ್ರಹಿಸುವ ಶಕ್ತಿಯನ್ನು ಹೊಂದಿದ್ದೇವೆ. (ಸ್ಪರ್ಶ, ರುಚಿ, ದೃಷ್ಟಿ, ವಾಸನೆ ಮತ್ತು ಕೇಳುವಿಕೆ) ಇವು ನಮ್ಮ ಮನಸ್ಸಿನ ಮೂಲಕ ನಮಗೆ ತಿಳಿಯುತ್ತದೆ. ಇದು ಕಂಪ್ಯೂಟರ್‌ನಲ್ಲಿ ಕೆಲಸಮಾಡುವ ಯಂತ್ರಗಳವೆ

ಕೆಲಸ ಮಾಡುತ್ತಾ ನಮಗೆ ಸರಿಯಾದ ಅರಿವನ್ನು ಕೊಡುತ್ತದೆ.

> ''ಇಹ ಲೋಕದ ನಡವಳಿಕೆಯನ್ನು ಅನುಸರಿಸದೇ ನೂತನ ಮನಸ್ಸನ್ನು ಹೊಂದಿಕೊಂಡು ಪರಲೋಕಬಾವದವರಾಗಿದ್ದಾರೆ''
>
> (ರೋಮಾ ೧೨ : ೨)

ನಿಜವಾದ ಕ್ರಿಸ್ತನಲ್ಲಿ ದೇವರ ಪವಿತ್ರ ಆತ್ಮವು ಶರೀರದಲ್ಲಿ ಮನಸ್ಸಿನಲ್ಲಿ ಸರಿಯಾದ ಅರ್ಥವನ್ನು ನೀಡುತ್ತಾ ಜೀವಿಸುವನು ಹೀಗೆ ನೀತಿಯಿಂದ ಜೀವಿಸಲು ಆತ್ಮೀಯ ಅಭಿವೃದ್ಧಿ ಹೊಂದಲು ನಮ್ಮ ಜೀವನದಲ್ಲಿ ಪವಿತ್ರ ಆತ್ಮನ ಸಹಾಯವು ತುಂಬಾ ಅಗತ್ಯವಾದದ್ದು. ಆದದರಿಂದ ನೀವು ಮನಸ್ಸಿನ ನಡುವನ್ನು ಕಟ್ಟಿಕೊಂಡು ಸ್ವಸ್ಥಚಿತ್ತರಾಗಿದ್ದು ಯೇಸುಕ್ರಿಸ್ತನು ಪ್ರತ್ಯಕ್ಷನಾಗವಾಗ ನಿಮಗೆ ದೊರಕುವ ಬಾಗ್ಯದ ಮೇಲೆ ನಿಮ್ಮ ನೀರೀಕ್ಷೆಯನ್ನು ಸಂಪೂರ್ಣವಾಗಿ ಇಡಿರಿ. (೧ ಪೇತ್ರನ ೧ : ೧೩)

ಎಲ್ಲಾ ಯೋಚನೆಗಳನ್ನು ಕ್ರಿಸ್ತನಿಗೆ ವಿದೇಯ ರಾಗವಂತೆ ಸೆರೆಹಿಡಿದು. (೨ ಕೋರಿಂಥ ೧೦ : ೫)

ಯಾವಾಗಲೂ ದೇವರನ್ನು ಕುರಿತು ಆಲೋಚನೆ ಮಾಡುತ್ತಾ ಆತನನ್ನು ಮಹಿಮೆ ಪಡಿಸುವಂತೆ ಜೀವಿಸಿರಿ.

(ಫಿಲಿಪಿ ೪ : ೮, ೯, ತೀತ ೨ : ೧೧-೪ ಇಬ್ರಿಯ ೪ : ೧೨, ೧೩ ೨ ತಿಮೊಥ ೩ : ೧೬, ೨೭)

ಒಂದು ಮಾತಿನಲ್ಲಿ ಹೇಳ ಬೇಕೆಂದರೆ ನಮ್ಮ ಮನಸ್ಸನ್ನು ದೇವರ ಕಾರ್ಯಗಳು ನಡೆಯುವಂತೆ ಮಾಡಬೇಕು. ಆದುದರಿಂದ ಸಹೋದರರೆ, ದೇವರ ಕನಿಕರವನ್ನು ನಿಮ್ಮ ನೆನಸಿಗೆ ತಂದು ನಿಮ್ಮನ್ನು ಬೇಡಿಕೊಳ್ಳುವುದೇನಂದರೆ, ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಗೆಯಾಗಿಯೂ ಇರುವ ಸಜೀವಯಜ್ಞವಾಗಿ ಅರ್ಪಿಸಿರಿ (ರೋಮಾ ೧೨ : ೧) ಪವಿತ್ರ ಆತ್ಮ ನಮ್ಮಲ್ಲಿ ವಾಸಮಾಡುತ್ತಾ ದೇವರಲ್ಲಿ ಭಯಭಕ್ತಿಯಿಂದ ಇರಲು, ಆತನ ಮಾರ್ಗದಲ್ಲಿ ಜೀವಿಸಲು ಸಹಾಯಮಾಡುತ್ತಾನೆ. ನಾವು ಯಾವರೀತಿಯಲ್ಲಿ ದೇವರನ್ನು ಮಹಿಮೆ ಪಡಿಸಬೇಕೋ ತಿಳಿದು ಹೊಸದಾಗಿ ಹುಟ್ಟಿದಕ್ಕೆ ಸರಿಯಾಗಿ ಕ್ರಿಸ್ತನಲ್ಲಿ

ಜೀವಿಸಲು ಪ್ರಾರಂಭಿಸಬೇಕು. ಹೇಗೆ ಜೀವಿಸಲು ಯೇಸುಕ್ರಿಸ್ತನ ಸನ್ನಿದಿಯಲ್ಲಿ ಪ್ರಾರ್ಥಿಸಿರಿ.

ನಮ್ಮ ಆತ್ಮದ ಮೂಲಕ ← ಮನಸ್ಸು ← ಐದು, ಉಸಿರು ಹಳೆಯ ಸ್ವಭಾವ ಮತ್ತು ಸೈತಾನನು.

## ಪ್ರಶ್ನೆಗಳು ಮತ್ತು ವಿಷಯಗಳು

೧. ನಮ್ಮ ಮನಸ್ಸು ಬದಲಾವಣೆ ಯಾಗಬೇಕೆಂದು ಬಯಸುವಿರಾ ? (ರೋಮಾ ೮ : ೫-೭ ಎಫೆಸ ೨ : ೩ ೪ : ೧೭, ೧೮)

೨. ನೀವು ಬದಲಾಗುವ ವಿಷಯವನ್ನು ಕುರಿತು ಹೇಗೆ ಆಲೋಚನೆ ಮಾಡಿರುವೆ ?

೩. ದೇವರು ನಿಮ್ಮನ್ನು ಬದಲಾಯಿಸಲು ಸಹಾಯಮಾಡುತ್ತಾನೋ ? (೧ ಥೆಸಲೋನಿಕ ೫ : ೨೩, ೨೪)

೪. ನಮ್ಮ ಜೀವನದಲ್ಲಿ ದೇವರ ಪವಿತ್ರ ಆತ್ಮನು ಜೀವಿಸಲು ಇರುವ ಅಂಶಗಳೇನು.

# ಪ್ರಾರ್ಥನೆ :

ಯೇಸುಕ್ರಿಸ್ತನೇ ನಿನ್ನ ಆತ್ಮದ ಅನುಸಾರವಾಗಿ ಜೀವಿಸ ಈ ಲೋಕದಲ್ಲಿ ಸಾಕ್ಷಿಯಾಗಿ ಇರಲು ಇತರರೊಂದಿಗೆ ಯೇಸು ಕ್ರಿಸ್ತನ ಪ್ರೀತಿಯನ್ನು ಹಂಚಲು ಸಹಾಯ ಮಾಡೆಂದು ಪ್ರಾರ್ಥನೆ ಯೇಸುವಿನ ನಾಮದಲ್ಲಿ ಸ್ತುತಿಸುತ್ತೇನೆ. ಆಮೆನ್.